V. L. COLLEGE OF PHARMACY
Inward No 124/92-93
Dated 6/7/92
RAICHUR-584 103

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್ ಎಂದು ರಾಯಚೂರಿನಲ್ಲಿರುವ ದಂತ ಕಾಲೇಜಿನ ಹೆಸರು ಬದಲಾಯಿಸುವ ಬಗ್ಗೆ.

7/7/92

ಓದಲಾಗಿದೆ: 1) ಪತ್ರ ಸಂಖ್ಯೆ:ಗುವಿಗು:ವಿವಿವಿ:ಸಂಲಗ್ನತೆ 90-91, 6256, ದಿನಾಂಕ: 30-3-91, ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

2) ಸರ್ಕಾರದ ಪತ್ರ ಸಂಖ್ಯೆ: ಆಕುಕ 38 ಎಂಎಂಇ 91, ದಿನಾಂಕ:10-10-91.

3) ಪತ್ರ ಸಂಖ್ಯೆ: ಎಎಲ್ಎಸಿ:ಎಎಂಇ:748:91-92, ದಿನಾಂಕ:24-10-91, ಕಾರ್ಯದರ್ಶಿ, ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್, ರಾಯಚೂರು, ಇವರಿಂದ.

**ಪ್ರಸ್ತಾವನೆ:**

ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ:30-3-91 ರಲ್ಲಿ ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ, ಇವರಿಂದ 1991-92 ನೇ ಶೈಕ್ಷಣಿಕ ವರ್ಷದಲ್ಲಿ ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನರವರಿಗೆ ದಂತ ಮಹಾವಿದ್ಯಾಲಯ ಸ್ಥಾಪಿಸಲು ಸಂಯೋಜನೆ ಮಾಡಿರುತ್ತದೆ.

ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ:10-10-91 ರ ಸರ್ಕಾರಿ ಪತ್ರದಲ್ಲಿ ಅಕಾಡೆಮಿ ಆಫ್ ಡೆಂಟಲ್ ಎಜುಕೇಷನ್, ರಾಯಚೂರು ಸಂಸ್ಥೆಯವರಿಗೆ 40 ವಿದ್ಯಾರ್ಥಿಗಳ ಸಾಮರ್ಥ್ಯದಲ್ಲಿ ದಂತ ಕಾಲೇಜು ಸ್ಥಾಪಿಸಲು ಅನುಮತಿ ನೀಡಲಾಯಿತು.

ಕ್ರಮ ಸಂಖ್ಯೆ(3) ರಲ್ಲಿ ಓದಲಾದ ದಿನಾಂಕ:24-10-91 ರ ಪತ್ರದಲ್ಲಿ ಸದರಿ ವಿದ್ಯಾ ಸಂಸ್ಥೆಯವರು ಅರ್ಜಿ ಸಲ್ಲಿಸಿ 91-92 ರ ಶೈಕ್ಷಣಿಕ ವರ್ಷದಿಂದ ದಂತ ಮಹಾವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದಿಂದ ಅನುಮತಿಸಿದ್ದು, ಅದು ''ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್'' ಎಂಬುದರ ಬದಲು ''ಅಕಾಡೆಮಿ ಆಫ್ ಡೆಂಟಲ್ ಎಜುಕೇಷನ್'' ರಾಯಚೂರು ಎಂದು ಸರಿ ಮಾಡಿ ಪರಿಷ್ಕೃತ ಆದೇಶ ಹೊರಡಿಸಲು ಕೋರಿ - ರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 38 ಎಂಎಂಇ 91, ಬೆಂಗಳೂರು, ದಿನಾಂಕ: 23-6-92**

ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರಿ ಪತ್ರ ಸಂಖ್ಯೆ: ಆಕುಕ 38 ಎಂಎಂಇ 91, ದಿನಾಂಕ:10-10-91 ರಲ್ಲಿ ಮಂಜೂರಾಗಿರುವ ''ಅಕಾಡೆಮಿ ಆಫ್ ಡೆಂಟಲ್ ಎಜುಕೇಷನ್'' ಎಂಬುದರ ಬದಲಾಗಿ ''ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್'' ಎಂದು ಹೆಸರನ್ನು ಬದಲಾಯಿಸಲು ಆದೇಶಿಸ ಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಕೆ. ವೆಂಕಟರಾಮಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕು.ಕ. ಇಲಾಖೆ (ವೈ.ಶಿ)

ಗೆ:

1) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಬೆಂಗಳೂರು.
2) ~~ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.~~
3) ಕಾರ್ಯದರ್ಶಿ, ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್, ಮಲಿಯಾಬಾದ, ರಾಯಚೂರು.
4) ಸಚಿವರ ಸಂಪುಟ ಶಾಖೆ (ವಿಷಯ ಸಂಖ್ಯೆ:ಸ:247:92, ದಿನಾಂಕ:27-4-92)

ಪ್ರ:

Seen